KAKL200007792019

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬಂಗಾರಪೇಟೆ.**

**ದಿನಾಂಕ 08 ನೇ ಜುಲೈ - 2022**

**- ಉಪಸ್ಥಿತರು -**

**ಶ್ರೀ. ಬಿ. ಕೇಶವಮೂರ್ತಿ**, ಬಿ.ಎ., ಎಲ್.ಎಲ್.ಬಿ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಬಂಗಾರಪೇಟೆ.

**ಅಸಲು ದಾವೆ ಸಂಖ್ಯೆ: 131/2019**

ವಾದಿಗಳು :**1.** ಮಂಗಮ್ಮ ಕೋಂ ಗೋವಿಂದಪ್ಪ,
ಬಿನ್ ಲೇಟ್ ಪಿಳ್ಳಪ್ಪ,
ಸುಮಾರು **51** ವರ್ಷ,
ವಾಸಃ ದೊಡ್ಡ ಬೊಮ್ಪಲಿ ಗ್ರಾಮ,
ಕೊಂಗರಹಳ್ಳಿ ಪೋಸ್ಟ್, ಕಾಮಸಮುದ್ರಂ ಹೋಬಳಿ,
ಬಂಗಾರಪೇಟೆ ತಾಲ್ಲೂಕು.

**2.** ನಾರಾಯಣಮ್ಮ, ಕೋಂ ಕೃಷ್ಣಮೂರ್ತಿ,
ಬಿನ್ ಲೇಟ್ ಪಿಳ್ಳಪ್ಪ, ಸುಮಾರು 48 ವರ್ಷ,
ವಾಸಃ ವೀರುಪಾಕ್ಷಪುರಂ ಗ್ರಾಮ, ಗಟಮುದಮಂಗಳಂ ಪೋಸ್ಟ್
ಕ್ಯಾಸಂಬಳಿ ಹೋಬಳಿ, ಕೆ.ಜಿ.ಎಫ್., ತಾಲ್ಲೂಕು.

**3.** ಜೆ.ಪಿ. ಶ್ರೀನಿವಾಸ, ಬಿನ್ ಲೇಟ್ ಪಿಳ್ಳಪ್ಪ,
ಸುಮಾರು 41 ವರ್ಷ,
ವಾಸಃ ಜನ್ನಘಟ್ಟ ಗ್ರಾಮ, ಕಾಮಸಮುದ್ರಂ ಹೋಬಳಿ,
ಬಂಗಾರಪೇಟೆ ತಾಲ್ಲೂಕು.

(ವಾದಿಗಳ ಪರವಾಗಿ ಶ್ರೀ. ಎ.ಎಂ.ಆರ್., ವಕೀಲರು)

**- ವಿರುದ್ಧ -**

**ಪ್ರತಿವಾದಿಗಳುಃ 1. ಮಲ್ಲಪ್ಪ,**
**ಬಿನ್ ಲೇಟ್ ಮುನೇಪ್ಪ @ ದೊಡ್ಡ ಮುನೇಪ್ಪ,**
**ಸುಮಾರು 60 ವರ್ಷ,**

**2. ಬೋಡೆಪ್ಪ,**
**ಬಿನ್ ಲೇಟ್ ಮುನೇಪ್ಪ @ದೊಡ್ಡ ಮುನೇಪ್ಪ,**
**ಸುಮಾರು 55 ವರ್ಷ,**

**3. ರಾಮಕೃಷ್ಣ,**
**ಬಿನ್ ಲೇಟ್ ಮುನೇಪ್ಪ @ದೊಡ್ಡ ಮುನೇಪ್ಪ,**
**ಸುಮಾರು 45 ವರ್ಷ,**

**ಎಲ್ಲರ ವಾಸಃ ಜನ್ನಘಟ್ಟೆ ಗ್ರಾಮ,**
**ಕಾಮಸಮುದ್ರಂ ಹೋಬಳಿ,**
**ಬಂಗಾರಪೇಟೆ ತಾಲ್ಲೂಕು.**

**(ಪ್ರತಿವಾದಿ 1 ರಿಂದ 3 ರವರ ಪರವಾಗಿ ಶ್ರೀ ಎಂ.ಪಿ.ಆರ್., ವಕೀಲರು)**

| | | |
|---|---|---|
| ದಾವೆಯನ್ನು ಹೂಡಿದ ದಿನಾಂಕ | : | 04.06.2019 |
| ದಾವೆಯ ಸ್ವರೂಪ | : | **ವಿಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ.** |
| ಸಾಕ್ಷಿಗಳನ್ನು ವಿಚಾರಣೆ ಮಾಡಲು ಪ್ರಾರಂಭಿಸಿದ ದಿನಾಂಕ | : | 14.10.2019 |
| ತೀರ್ಪನ್ನು ಉಚ್ಛರಿಸಿದ ದಿನಾಂಕ | : | 08.07.2022 |
| ಒಟ್ಟು ಅವಧಿ | : | ವರ್ಷ/ಗಳು 03, ತಿಂಗಳು/ಗಳು 01, ದಿನ/ಗಳು 04 |

ಸಹಿ/-
**(ಬಿ. ಕೇಶವಮೂರ್ತಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
**ಬಂಗಾರಪೇಟೆ.**

## - ತೀರ್ಪು -

ವಾದಿಯರು ಈ ದಾವೆಯನ್ನು ದಾವಾ ಶೆಡ್ಯೂಲ್ ಸ್ವತ್ತುಗಳಲ್ಲಿ ವಾದಿಯರಿಗೆ **1/2** ನೇ ಭಾಗದ ಹಿಸ್ಸೆ ಹಕ್ಕು ಇದೆ ಎಂದು ನಿರ್ಧರಿಸಿ, ಘೋಷಿಸಿ ಅದನ್ನು ದಾವಾ ಶೆಡ್ಯೂಲ್ ಸ್ವತ್ತುಗಳಿಂದ ಪ್ರತ್ಯೇಕಿಸಿ, ಪ್ರತ್ಯೇಕ ಸ್ವಾಧೀನವನ್ನು ವಾದಿಯರಿಗೆ ಗಡಿಗುರುತುಗಳ ಮೂಲಕ ಪ್ರತಿವಾದಿಯರಿಂದ ಹೊಂದುವಂತೆ ಪರಿಹಾರ ಕೋರಿ ಹೂಡಿರುತ್ತಾರೆ.

**2.** ವಾದಿಯ ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ ಃ

ವಾದಿಯರ ವಾದ ಪತ್ರದಂತೆ, ವಾದಿ ಮತ್ತು ಪ್ರತಿವಾದಿಗಳ ಮೂಲ ಪುರುಷ ಮಲ್ಲಪ್ಪ ಅಲಿಯಾಸ್ ಕವಲಿ ಮಲ್ಲಪ್ಪ ರವರಾಗಿದ್ದು, ಅವರಿಗೆ ಇಬ್ಬರು ಪತ್ನಿಯರು ಇದ್ದು ಮೊದಲನೇ ಪತ್ನಿ ತಿಮಕ್ಕ ರವರಾಗಿದ್ದು, ಅವರ ದಾಂಪತ್ಯದಿಂದ ಮುನೇಪ್ಪ ಅಲಿಯಾಸ್ ದೊಡ್ಡ ಮುನೇಪ್ಪ ಮತ್ತು ಹೊಂಬಾಳಮ್ಮ ಎಂದು ಇಬ್ಬರು ಮಕ್ಕಳು ಜನಿಸಿರುತ್ತಾರೆ. ಮೂಲ ಪುರುಷ ಮಲ್ಲಪ್ಪ ಅಲಿಯಾಸ್ ಕವಲಿ ಮಲ್ಲಪ್ಪ ರವರಿಗೆ ಮುನಿಯಮ್ಮ ರವರು ಎರಡನೇ ಪತ್ನಿಯಾಗಿದ್ದು ಅವರಿಗೆ ಯಾವುದೇ ಮಕ್ಕಳು ಇರುವುದಿಲ್ಲವೆಂದು ತಿಳಿಸುತ್ತಾರೆ. ಮೇಲ್ಕಂಡ ಮುನೇಪ್ಪ ಅಲಿಯಾಸ್ ದೊಡ್ಡ ಮುನೇಪ್ಪ ರವರು ಸಾದಮ್ಮ ರವರನ್ನು ವಿವಾಹವಾಗಿದ್ದು ಅವರ ದಾಂಪತ್ಯದಿಂದ ಪ್ರತಿವಾದಿಗಳು ಜನಿಸಿರುವುದಾಗಿ ಪ್ರತಿಪಾದಿಸುತ್ತಾರೆ. ಮೇಲ್ಕಂಡ ಹೋಂಬಾಳಮ್ಮ ರವರು ಅದೇ ಗ್ರಾಮದ ಪಿಳ್ಳಪ್ಪ ರವರನ್ನು ವಿವಾಹ ಮಾಡಿಕೊಂಡಿದ್ದು, ಅವರ ದಾಂಪತ್ಯದಿಂದ ವಾದಿಗಳು ಜನಿಸಿರುವುದಾಗಿ ಪ್ರತಿಪಾದಿಸುತ್ತಾರೆ. ವಾದಿಗಳ ತಂದೆ ಪಿಳ್ಳಪ್ಪ, ಪ್ರತಿವಾದಿಗಳ ತಂದೆ ಮುನೇಪ್ಪ ಮತ್ತು ಕವಲಿ ಮಲ್ಲಪ್ಪ ರವರ ಎರಡನೇ ಪತ್ನಿ ಮುನಿಯಮ್ಮ ರವರು ದಿನಾಂಕಃ 10.11.1974 ರಲ್ಲಿ ದಾವಾ ಸ್ವತ್ತನ್ನು ಜಂಟಿಯಾಗಿ ನೊಂದಾಯಿತ ಕ್ರಯ ಪತ್ರದ ಮುಖಾಂತರ ಖರೀದಿಸಿರುವುದಾಗಿ ಪ್ರತಿಪಾದಿಸುತ್ತಾರೆ ಸದರಿ ಕ್ರಯ ಪತ್ರದ ಅನುಸಾರ ಮೇಲ್ಕಂಡ ಮೂವರ ಹೆಸರಿನಲ್ಲಿ ಜಂಟಿ ಖಾತೆ ಇರುವುದಾಗಿ, ಈಗ ಮೇಲ್ಕಂಡ ಮೂವರು ಮೃತಪಟ್ಟಿದ್ದು, ಮುನಿಯಮ್ಮ ರವರು ಯಾವುದೇ ಸಂತಾನ ಇಲ್ಲದೇ

ಮೃತಪಟ್ಟಿರುವುದರಿಂದ ಅವರ ಸ್ವತ್ತು ಸಹಾ ವಾದಿ ಮತ್ತು ಪ್ರತಿವಾದಿಗಳಿಗೆ ಸಮಾನವಾಗಿ ಹಂಚಿಕೆಯಾಗಬೇಕಿದ್ದು ಅದರಂತೆ ದಾವಾ ಸ್ವತ್ತಿನಲ್ಲಿ 1/2 ಭಾಗದ ಸ್ವತ್ತಿನಲ್ಲಿ ಹಕ್ಕು ಇರುವುದಾಗಿ ಪ್ರತಿಪಾದಿಸುತ್ತಾರೆ. ಪ್ರತಿವಾದಿಗಳು ವಾದಿಗಳಿಗೆ ವಂಚಿಸಲು ಸುಳ್ಳು ವಂಶವೃಕ್ಷವನ್ನು ಸೃಷ್ಟಿಸಿ ತಮ್ಮ ಹೆಸರಿಗೆ ದಾವಾ ಸ್ವತ್ತಿನ ಖಾತೆ ಬದಲಾವಣೆ ಮಾಡಿಕೊಳ್ಳಲು ಪ್ರಯತ್ನ ಪಟ್ಟಿದ್ದು ಇದನ್ನು ತಿಳಿದು ಮೂರನೇ ವಾದಿ ಕಂದಾಯ ಅಧಿಕಾರಿಗಳ ಮುಂದೆ ತಕರಾರು ಸಲ್ಲಿಸಿರುವುದಾಗಿ ತಿಳಿಸುತ್ತಾರೆ. ಆ ನಂತರ ವಾದಿಯರು ಪಂಚಾಯ್ತಿತಿ ಮಾಡಿಸಿ ತಮ್ಮ ಭಾಗದ ಹಿಸ್ಸಾ ಸ್ವತ್ತನ್ನು ಪ್ರತ್ಯೇಕ ಮಾಡಿಕೊಡುವಂತೆ ಪ್ರತಿವಾದಿಗಳನ್ನು ಕೋರಿದ್ದು ಅವರು ಹಿಸ್ಸೆ ಮಾಡಿಕೊಡದ ಕಾರಣ ಮತ್ತು ಅಕ್ರಮವಾಗಿ ಖಾತೆ ಬದಲಾವಣೆ ಮಾಡಿಸಿಕೊಳ್ಳಲು ಪ್ರಯತ್ನ ಮುಂದುವರೆಸಿದ ಕಾರಣ ವಾದಿಗಳು ಮೇಲ್ಕಂಡ ಪರಿಹಾರ ಕೋರಿ ಈ ದಾವೆ ತಂದಿರುವುದಾಗಿ ಪ್ರತಿಪಾದಿಸುತ್ತಾರೆ.

**3.** ದಾವಾ ನೋಂದಣಿ ಮಾಡಿಕೊಂಡು ಪ್ರತಿವಾದಿಯರಿಗೆ ಸಮನ್ಸ್ ನೀಡಲಾಯಿತು. ಪ್ರತಿವಾದಿಯರಿಗೆ ಸಮನ್ಸ್ ಜಾರಿಯಾಗಿದ್ದು ಪ್ರತಿವಾದಿಗಳು ವಕೀಲರ ಮುಖಾಂತರ ಹಾಜರಾಗಿರುತ್ತಾರೆ. ಆದರೆ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ

**4.** 3 ನೇ ವಾದಿ ಈ ಪ್ರಕರಣವನ್ನು ಸಾಭೀತು ಪಡಿಸಲು ಸ್ವತಃ ಪಿ.ಡಬ್ಲ್ಯೂ.**-1** ಎಂದು ವಿಚಾರಣೆಗೆ ಒಳಪಟ್ಟಿದ್ದು, ನಿಪಿ.**01** ರಿಂದ **05** ರವರೆಗಿನ ದಾಖಲಾತಿಗಳನ್ನು ಗುರುತಿಸಿರುತ್ತಾರೆ. ಪ್ರತಿವಾದಿಯರ ಪರವಾಗಿ ಯಾವುದೇ ಸಾಕ್ಷ್ಯ ಮತ್ತು ಯಾವುದೇ ಸಾಕ್ಷಿ ಇರುವುದಿಲ್ಲ.

**5.** ವಾದಿಯರ ಪರ ವಾದವನ್ನು ಕೇಳಲಾಯಿತು ಈ ಪ್ರಕರಣದ ವಾದ ಪತ್ರ ಮತ್ತು ಪ್ರಮಾಣ ಪತ್ರ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ ನನ್ನ ಪರಿಗಣನೆಗೆ ಈ ಕೆಳಕಂಡ ಅಂಶ ಕಂಡುಬಂದಿರುತ್ತದೆ.

## ಅಂಶಗಳು

1. ವಾದಿಯರು ಈ ದಾವೆಯ ವಾದಪತ್ರದಲ್ಲಿ ಕೇಳಿರುವ ಪರಿಹಾರಗಳನ್ನು ಪಡೆಯಲು ಅರ್ಹರೇ ?

2. ಯಾವ ಆದೇಶ ಅಥವಾ ಡಿಕ್ರಿ ?

6. ಮೇಲ್ಕಂಡ ಎರಡು ಅಂಶಗಳಿಗೆ ಕೆಳಕಂಡಂತೆ ಉತ್ತರಿಸುತ್ತೇನೆಃ

ಅಂಶ. 1 ಃ ಸಕಾರಾತ್ಮಕವಾಗಿ.
ಅಂಶ. 2 ಃ ನನ್ನ ಅಂತಿಮ ಆದೇಶದಂತೆ.

## ಕಾ ರ ಣ ಗ ಳು

7. **ಅಂಶ- 1 ಃ-** ವಾದಿಯರು ತಮ್ಮ ವಾದ ಪತ್ರದಲ್ಲಿ ತಿಳಿಸಿರುವ ಸಂಗತಿಗಳನ್ನು ವಾದಿ ಸಾಕ್ಷಿ-1 ರವರು ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಪುನರ್ ಪ್ರತಿಪಾದಿಸಿರುತ್ತಾರೆ ಮತ್ತು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ.1 ರಿಂದ 5ರ ದಾಖಲಾತಿಗಳನ್ನು ಗುರುತಿಸಿರುತ್ತಾರೆ. ವಾದಿಗಳ ತಂದೆ ಪಿಳ್ಳಪ್ಪ, ಪ್ರತಿವಾದಿಗಳ ತಂದೆ ಮುನೇಪ್ಪ ಮತ್ತು ಕವಲಿ ಮಲ್ಲಪ್ಪ ರವರ ಎರಡನೇ ಪತ್ನಿ ಮುನಿಯಮ್ಮ ರವರು ದಿನಾಂಕಃ 10.11.1974 ರಲ್ಲಿ ದಾವಾ ಸ್ವತ್ತನ್ನು ಜಂಟಿಯಾಗಿ ನೊಂದಾಯಿತ ಕ್ರಯ ಪತ್ರದ ಮುಖಾಂತರ ಖರೀದಿಸಿರುವುದಾಗಿ, ಸದರಿ ಕ್ರಯ ಪತ್ರದ ಅನುಸಾರ ಮೇಲ್ಕಂಡ ಮೂವರ ಹೆಸರಿನಲ್ಲಿ ಜಂಟಿ ಖಾತೆ ಇರುವುದಾಗಿ ವಾದಿಗಳು ಪ್ರತಿಪಾದಿಸುತ್ತಾರೆ. ವಾದಿಗಳ ಪರ ಹಾಜರುಪಡಿಸಿ ಗುರುತಿಸಿರುವ ನಿಪಿ-2 ಮತ್ತು ನಿಪಿ-2ಎ ಕ್ರಯ ಪತ್ರವನ್ನು ಪರಿಶೀಲಿಸಿದಾಗ ವಾದಿಗಳು ಪ್ರತಿಪಾದಿಸುವಂತೆ ಮೇಲ್ಕಂಡ ಮೂವರು ದಾವಾ ಸ್ವತ್ತನ್ನು ಜಂಟಿಯಾಗಿ ಖರೀದಿಸಿರುವುದು ಕಂಡುಬರುತ್ತದೆ. ನಿಪಿ-4 ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಮೇಲ್ಕಂಡ ಮೂವರ ಹೆಸರಿನಲ್ಲಿ ದಾವಾ ಸ್ವತ್ತಿನ ಖಾತೆ ಇರುವುದು ಕಂಡುಬರುತ್ತದೆ. ಮೇಲ್ಕಂಡ ಮೂರು ಜನರು ಈಗ ಮೃತಪಟ್ಟಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ಮೇಲ್ಕಂಡ ಮೂರು ಜನರ ವಾರಸುದಾರರು ಎಂಬುದು ನಿಪಿ-1 ವಂಶವೃಕ್ಷ ಪ್ರಮಾಣ ಪತ್ರವನ್ನು ಪರಿಶೀಲಿಸಿದಾಗ ಕಂಡುಬರುತ್ತದೆ. ವಾದಿಗಳ ತಂದೆ ಪಿಳ್ಳಪ್ಪ, ಪ್ರತಿವಾದಿಗಳ ತಂದೆ ಮುನೇಪ್ಪ ಮತ್ತು ಕವಲಿ ಮಲ್ಲಪ್ಪ ರವರ ಎರಡನೇ ಪತ್ನಿ ಮುನಿಯಮ್ಮ ರವರು ದಿನಾಂಕಃ 10.11.1974 ರಲ್ಲಿ ದಾವಾ

ಸ್ವತ್ತನ್ನು ಜಂಟಿಯಾಗಿ ನೊಂದಾಯಿತ ಕ್ರಯ ಪತ್ರದ ಮುಖಾಂತರ ಖರೀದಿಸಿರುವುದರಿಂದ ಅವರಿಗೆ ದಾವಾ ಸ್ವತ್ತಿನಲ್ಲಿ ಸಮಾನ ಭಾಗಾಂಶದ ಹಕ್ಕು ಇರುತ್ತದೆ. ಈಗ ಖರೀದಿದಾರರಲ್ಲಿ ಒಬ್ಬರಾದ ಮುನಿಯಮ್ಮ ರವರು ಯಾವುದೇ ಸಂತಾನ ಇಲ್ಲದೇ ಮೃತಪಟ್ಟಿರುವುದರಿಂದ ಅವರ ಹಿಸ್ಸಾ ಸ್ವತ್ತು ವಾರಸದ ಆಧಾರದ ಮೇಲೆ ಅವರ ಗಂಡನ ಮೊದಲನೇ ಪತ್ನಿಯ ಮಕ್ಕಳಾದ ಮುನೇಪ್ಪ ಮತ್ತು ಹೊಂಬಾಳಮ್ಮ ರವರಿಗೆ ಬರುತ್ತದೆ. ವಾದಿ ಮತ್ತು ಪ್ರತಿವಾದಿಗಳು ಸದರಿ ಮುನೇಪ್ಪ ಮತ್ತು ಹೊಂಬಾಳಮ್ಮ ರವರ ವಾರಸುದಾರರಾಗಿರುತ್ತಾರೆ, ಆದ್ದರಿಂದ ಮುನಿಯಮ್ಮ ರವರ ಹಿಸ್ಸಾ ಸ್ವತ್ತು ಅವರ ಮರಣ ನಂತರ ಮುನೇಪ್ಪ ಮತ್ತು ಹೊಂಬಾಳಮ್ಮ ರವರ ವಾರಸುದಾರರಿಗೆ ಸಮಾನವಾಗಿ ಹೋಗುತ್ತದೆ. ಅದರಂತೆ ಪ್ರಸ್ತುತ ಪ್ರಕರಣದಲ್ಲಿ ಒಟ್ಟಾರೆ ವಾದಿಗಳು ಮತ್ತು ಪ್ರತಿವಾದಿಗಳು 1/2 ಭಾಗದ ಸ್ವತ್ತಿಗೆ ಹಕ್ಕುಳವರಾಗಿರುತ್ತಾರೆ. ಆದ್ದರಿಂದ ವಾದಿಯು ಕೇಳಿರುವ ಪರಿಹಾರ ಸಮಂಜಸವಾಗಿದ್ದು ಅದರಂತೆ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ. ಆ ಕಾರಣ ಅಂಶ.1 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

**8.** <u>ಅಂಶ 2ಃ-</u> ಮೇಲ್ಕಂಡ ಚರ್ಚೆಯಿಂದ ಅಂಶ.2 ಕ್ಕೆ ಈ ಕೆಳಕಂಡಂತೆ ಉತ್ತರಿಸುತ್ತೇನೆಃ

## <u>ಆದೇಶ</u>

ವಾದಿಗಳ ದಾವೆಯನ್ನು ಖರ್ಚು ಸಹಿತ ಈ ಮೂಲಕ ಡಿಕ್ರಿ ಮಾಡಲಾಗಿದೆ.

ವಾದಿಗಳು ಒಟ್ಟಾಗಿ ದಾವಾ ಸ್ವತ್ತಿನಲ್ಲಿ 1/2 ನೇ ಭಾಗದ ಸ್ವತ್ತಿನ ಹಕ್ಕುವುಳ್ಳವರೆಂದು ಈ ಮೂಲಕ ಘೋಷಿಸಿದೆ.

ಪ್ರತಿವಾದಿಗಳು ಒಟ್ಟಾಗಿ ದಾವಾ ಸ್ವತ್ತಿನಲ್ಲಿ 1/2 ನೇ ಭಾಗದ ಸ್ವತ್ತಿನ ಹಕ್ಕುವುಳ್ಳವರೆಂದು ಈ ಮೂಲಕ ಘೋಷಿಸಿದೆ.

ಮೇಲ್ಕಂಡಂತೆ ಪ್ರಾಥಮಿಕ ಡಿಕ್ರಿ ಬರೆಯಿರಿ

(ಶೀಘ್ರಲಿಪಿಗಾರರಿಗೆ ಕಂಪ್ಯೂಟರಿನಲ್ಲಿ ಆಳವಡಿಸುವಂತೆ ನೇರವಾಗಿ ಉತ್ಕಲೇಖನ ಕೊಟ್ಟಿದ್ದು, ನಂತರದಲ್ಲಿ ತೀರ್ಪನ್ನು ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕ **08 ನೇ ಜುಲೈ 2022** ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ)

ಸಹಿ/-
**(ಬಿ. ಕೇಶವಮೂರ್ತಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಬಂಗಾರಪೇಟೆ.

**ಅನುಬಂಧ**

1. **ವಾದಿಯ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ವಿವರಃ**

ಪಿಡಬ್ಲ್ಯೂ.1 ಃ **ಜೆ.ಪಿ. ಶ್ರೀನಿವಾಸ್**

2. **ವಾದಿಯ ಪರ ಗುರ್ತಿಸಲಾದ ದಾಖಲೆಗಳ ವಿವರಃ**

ನಿಪಿ. 1 ಃ ವಂಶವೃಕ್ಷದ ಪ್ರಮಾಣ ಪತ್ರ
ನಿಪಿ. 2 ಃ ಖರೀದಿ ಕಾಗದ ಪತ್ರದ ಅಸಲು ಪತ್ರ
ನಿಪಿ. 2 ಎ ಃ ಅದರ ದೃಢೀಕೃತ ಪ್ರತಿ
ನಿಪಿ. 3 ಃ ಒಂದು ಎಂ.ಆರ್.
ನಿಪಿ. 4 ಃ ಒಂದು ಪಹಣಿ ಪತ್ರಿಕೆ
ನಿಪಿ. 5 ಃ ಪಟ್ಟಾ ಪುಸ್ತಕ

3. **ಪ್ರತಿವಾದಿಗಳ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ವಿವರಃ**

-- ಯಾರು ಇಲ್ಲಾ --

4. **ಪ್ರತಿವಾದಿಗಳ ಪರ ವಿಚಾರಣೆ ಗುರ್ತಿಸಲಾದ ದಾಖಲೆಗಳ ವಿವರಃ**

-- ಏನು ಇಲ್ಲಾ --

ಸಹಿ/-
**(ಬಿ. ಕೇಶವಮೂರ್ತಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಬಂಗಾರಪೇಟೆ.